ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮೂರನೆಯ ವೇತನ ಆಯೋಗದ ಶಿಫಾರಸಿನ ಮೇಲೆ ಸರ್ಕಾರ ಬಹಳಷ್ಟು ವಿಚಾರಮಾಡಿ ಕ್ರಮ ತೆಗೆದುಕೊಂಡಿದೆ. ಮತ್ತಷ್ಟು ಸರ್ಕಾರದ ಆಯೋಗದ ಶಿಫಾರಸ್ಸನ್ನು ಸಾಮಾನ್ಯವಾಗಿ ಒಪ್ಪಿಕೊಂಡಿದೆ. ಇನ್ನು ಇದರಲ್ಲಿ ಕೆಲವು ವಿಚಾರಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಎರಡನೇ ಹಾಗೂ ಪ್ರಥಮ ದರ್ಜೆ ಗುಮಾಸ್ತರು ಮತ್ತು ಇತರರು.

೨೨೩೮. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ) ಶ್ರೀ ಎ. ಕೃಷ್ಣಪ್ಪ (ವರ್ತೂರು) ಮತ್ತು ಶ್ರೀ ಗೆದಪಾಲ ಮುಕಂದ ಕಾನಡೆ (ಸಿರಸಿ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಪೋಲೀಸ್ ಕಮೀಷನರ್ ಕಛೇರಿ, ಡಿ. ಜಿ. ಪಿ. ಕಛೇರಿ ಇನ್ನು ಮುಂತಾದ ಕಛೇರಿಗಳಲ್ಲಿ ಐದು ವರ್ಷಗಳಿಗೂ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು, (ಲಿಪಿಕ ನೌಕರರು, ೨ನೇ ದರ್ಜೆ ಪ್ರಥಮ ದರ್ಜೆ ನೌಕರರು ಹಾಗೂ ಸೂಪರಿಂಟೆಂಡೆಂಟ್ ಮುಂತಾದವರ ವಿವರಗಳನ್ನು ನೀಡುವುದು)

ಆ) ಬೆಂಗಳೂರು ನಗರ ಪೋಲೀಸ್ ಕಮಿಷನರವರ ಕಛೇರಿಯಲ್ಲಿನ ಇಲಾಖಾ ವಿಚಾರಣೆ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಗುಮಾಸ್ತರೊಬ್ಬರಿಗೆ ಸೂರಿಂಟೆಂಡೆಂಟ್ ಆಗಿ ಬಡ್ತಿ ನೀಡಿ ಅದೇ ಸ್ಥಳದಲ್ಲಿ ಮುಂದುವರಿಯುವಂತೆ ನೇಮಕ ಮಾಡಿರುವುದು ನಿಜವೇ.

ಇ) ಹಾಗಿದ್ದಲ್ಲಿ: ಅದಕ್ಕೆ ಕಾರಣಗಳೇನು.

ಈ) ಸದರಿಯವರು ಪೋಲೀಸ್ ಸಿಬ್ಬಂದಿಗೆ ನೀಡುತ್ತಿರುವ ಮಾನಸಿಕ ತಾರತಮ್ಯದ ಬಗ್ಗೆ ಡಿ.ಜಿ.ಪಿ. ಯವರಿಗೆ ದೂರುಗಳೇನಾದರೂ ಬಂದಿವೆಯೇ.

ಉ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಯವರು).—

ಅ)

	ಶಾಖಾ ಸೂಪರಿಂಡೆಂಟರು	ಪ್ರಥಮ ದರ್ಜೆ ಸಹಾಯಕ	ದ್ವಿತೀಯ ದರ್ಜೆ ಸಹಾಯಕರು
೧. ಪೋಲೀಸ್ ಕಮೀಷನರ್ ಕಛೇರಿ	೧	೨೧	೩೨
೨ ಡಿಜಿಪಿ ಕಛೇರಿ	೭	೩೩	೨೧
೩ ಇತರ ಕಛೇರಿಗಳು.	೭	೫೨	೭೪
ಒಟ್ಟು	೧೫	೧೦೬	೧೨೭

ಆ) ಹೌದು.

ಇ) ಅವರ ಸೇವೆ ಆತ್ಯಾವಶ್ಯಕವೆಂದು ಕಂಡು ಬಂದ ಕಾರಣ ಸದರಿಯವರನ್ನು ಅವರು ಮುಂಬಡ್ತಿ ಪಡೆದ ಮೇಲೂ ಅದೇ ಶಾಖೆಯಲ್ಲಿ ಮುಂದುವರಿಸಲಾಗಿದೆ.

ಈ) ಹೌದು.

ಉ) ಆರೋಪಗಳು ಅನಿರ್ದಿಷ್ಟವಾಗಿದ್ದರಿಂದ ಯಾವ ಕ್ರಮವನ್ನು ಕೈಗೊಂಡಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಐದು ವರ್ಷಗಳಿಗೂ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವವರ ಪಟ್ಟಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಮಂದಿ ಹರಿಜನರಿದ್ದಾರೆಂಬುದನ್ನು ಹೇಳುತ್ತೀರಾ ಒಂದನೆಯದು. ಎರಡನೆಯದಾಗಿ ಗುಮಾಸ್ತ ಮತ್ತು ಸೂಪರಿಂಟೆಂಡೆಂಟ್ ಕೆಲಸಕ್ಕೆ ಪ್ರಮೋಷನ್ ಬರುವಂಥವರು ಇದ್ದರೂ ಅವರನ್ನು ತಪ್ಪಿಸಿ, ಅದೇ ಜಾಗದಲ್ಲಿ ಕೆಲಸ ಮಾಡುತ್ತಿದ್ದವರು, ಅವರ ಮೇಲೆ ಅಲಿಗೇಷನ್ ಇದ್ದರೂ ಅವರಿಗೆ ಪ್ರಮೋಷನ್ ಕೊಡಲು ಕಾರಣವೇನು?

ಶ್ರೀ ವೀರಣ್ಣ —ಹರಿಜನರು ಎಷ್ಟು ಜನರು ಇದ್ದಾರೆಂಬುದಕ್ಕೆ ನನ್ನಲ್ಲಿ ವಿವರಗಳು ಇಲ್ಲ. ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ ಯಾವ ಯಾವ ಆಫೀಸಿನಲ್ಲಿ ಎಷ್ಟೆಷ್ಟು ಮಂದಿ ಇದ್ದಾರೆಂಬುದಕ್ಕೆ ವಿವರಗಳನ್ನು ಕಳುಹಿಸಿಕೊಡುತ್ತೇನೆ. ಮತ್ತು ಇವರ ಮೇಲೆ ಅಲಿಗೇಷನ್, ಆರೋಪಗಳಿದ್ದರೂ ಅವರನ್ನು ಅಲ್ಲಿಯೇ ಏತಕ್ಕೆ ಇಟ್ಟಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಹೇಳುವುದಾದರೆ ಆರೋಪ ಇದ್ದು ಆ ಆರೋಪಗಳನ್ನು ವಿಚಾರಣೆ ಮಾಡಿದ್ದೇವೆ. ಆರೋಪಗಳನ್ನು ಪ್ರೂವ್ ಮಾಡದೆ ಇರುವುದರಿಂದ ಅವರನ್ನು ಅಲ್ಲಿಯೇ ಇಟ್ಟಿದ್ದೇವೆ. ಮತ್ತೆ ಯಾವ ಯಾವ ಅಧಿಕಾರಿ ಎಂಥ ಜಾಗದಲ್ಲಿರಬೇಕು ಎನ್ನುವುದನ್ನು ಅರ್ಥಮಾಡಿಕೊಂಡು ಇಟ್ಟಿದ್ದೇವೆ. ಮತ್ತೆ ಹರಿಜನರಿಗೆ ಹಿಂದುಳಿದ ವರ್ಗದವರಿಗೆ ಆ ಜನರಿಂದ ಕಿರುಕುಳವಾಗುತ್ತಿದ್ದರೂ ಅವರನ್ನು ಅಲ್ಲಿಯೇ ಏತಕ್ಕೆ ಇಟ್ಟಿದ್ದೀರೆಂದು ಕೇಳಿದ್ದಾರೆ. ಈ ಬಗ್ಗೆ ನಿರ್ದಿಷ್ಟವಾದ ನಿದರ್ಶನಗಳನ್ನು ಕೊಟ್ಟಲ್ಲಿ ವರ್ಗಮಾಡುವುದಲ್ಲದೆ, ಅವರಮೇಲೆ ಎನ್‌ಕ್ವೈರಿ ಮಾಡಿ ಅವರನ್ನು ಕೆಲಸದಿಂದ ವಜಾ ಮಾಡುವುದಾಗಿಯೂ ಕೂಡ ಹೇಳಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಲ್ಲ ಸ್ವಾಮಿ.ಅವರ ಮೇಲೆ ಅಲಿಗೇಷನ್ ಇದೆ ಹರಿಜನರಿಗೆ ತೊಂದರೆ ಕೊಡುತ್ತಾರೆಂದು ಅರೋಪವಿರುವ ಫೈಲ್ ಇದ್ದರೂ ಅವರಿಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಇದು ನಮ್ಮ ದೂರು. ಅವರಿಗೆ ಪ್ರೊಮೋಷನ್ ಕೊಟ್ಟು ಅದೇ ಜಾಗದಲ್ಲಿಟ್ಟು ಹರಿಜನರಿಗೆ ತೊಂದರೆ ಕೊಡಿಸುತ್ತಿದ್ದೀರಿ. ಇದು ಏತಕ್ಕೆ?

ಶ್ರೀ ವೀರಣ್ಣ —ಅಧ್ಯಕ್ಷರೆ, ನಾನು ಮೊದಲೇ ಹೇಳಿದೆ. ಬೇರೆಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಅಲ್ಲಿಟ್ಟಿಲ್ಲ ಅಥವಾ ಅವರ ಮೇಲೆ ನಮಗೆ ಪ್ರೀತಿ ವಿಶ್ವಾಸ ಇಲ್ಲ ಅವರು ಅಲ್ಲೇ ಇರಬೇಕು ಎಂಬ ಭಾವನೆಯೂ ಇಲ್ಲ ಇಂಥ ಹರಿಜನರಿಗೆ ಈ ರೀತಿಯಾಗಿ ತೊಂದರೆ ಕೊಟ್ಟಿದ್ದಾರೆಂದು ನಿರ್ದಿಷ್ಟವಾಗಿ ಕಾಸಗಿರಿಗೇ ಬರೆದುಕೊಡಲಿ. ನಾನು ವಿಚಾರ ಮಾಡಿ ತನಿಖೆ ಮಾಡಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ ಏನು ಶಿಕ್ಷೆ ಬೇಕೋ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ —ಅವರ ಸೇವೆ ಆತ್ಯಾವಶ್ಯಕವೆಂದು ಕಂಡುಬಂದಿದೆ ಎಂದು ಹೇಳಿದ್ದೀರಿ. ಏನದು ಅವಶ್ಯಕತೆ? ಉಳಿದ ಪೋಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ನಿಮಗೆ ನಂಬಿಕೆ ಇಲ್ಲವೆ? ಇವರ ಸೇವೆ ಅವಶ್ಯಕ ಎಂದು ಹೇಳುವುದಕ್ಕೆ ಕಾರಣ ಏನು ? ಉಳಿದ ಪೋಲೀಸರ ಮೇಲೆ ನಿಮಗೆ ನಂಬಿಕೆ ಇಲ್ಲವೆ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಕೆಲವು ಅಧಿಕಾರಿಗಳು ಕೆಲವು ವಿಷಯಗಳಲ್ಲಿ ಪರಿಣತಿ ಹೊಂದಿರುವುದರಿಂದ ಆಡಳಿತಾತ್ಮಕ ದೃಷ್ಟಿಯಿಂದ ಅವರಿಗೆ ಮುಂಬಡ್ತಿ ಕೊಟ್ಟರೂ ಅಲ್ಲಿಯೇ ನೆವರನ್ನು ಹಾಕಬೇಕಾಗುತ್ತದೆ, ಮತ್ತು ಕೆಲವು ಅಧಿಕಾರಿಗಳು ಮೊದಲನೇ ದರ್ಜೆ, ಎರಡನೇ ದರ್ಜೆ ಸಹಾಯಕರಾಗಿದ್ದವರಿಗೆ ಒಡ್ತಿ ಕೊಟ್ಟಾಗ ಆಯಾ ಜಾಗದಲ್ಲೇ ಸೂಪರಿಂಟೆಂಡೆಂಟರನ್ನಾಗಿ ದೇಮಕ ಮಾಡುತ್ತಿರುವುದರಿಂದ ಅಲ್ಲೇ ಕೊಟ್ಟಿದೆ. ಅವರನ್ನು ಬೇಗಳೂರು ಸಿಟಿಯಲ್ಲೇ ವರ್ಗ

ಮಾಡಬೇಕು, ಬೇರೆ ಕಡೆ ವರ್ಗ ಮಾಡುವುದಕ್ಕಾಗುವುದಿಲ್ಲ. ನಿರ್ದಿಷ್ಟವಾಗಿ ಅವರ ಮೇಲೆ ದೂರು ಕೊಡಲಿ. ಸ್ವತಃ ನಾವೇ ವಿಚಾರಣೆ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಯಾರು ಅರ್ಹರಿರುತ್ತಾರೋ ಅವರನ್ನು ಅಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ದೂರು ಕೊಟ್ಟರೆ ಏನು ಮಾಡುತ್ತೀರಿ? ಆಪರು ಅಲ್ಲಿ ಇರುವವರೆಗೂ ನಾವು ಯಾವ ದೂರು ಕೊಟ್ಟರೂ ಮುಚ್ಚಿಡುತ್ತಾರೆ. ಈಗಾಗಲೇ ಆ ರೀತಿ ಕೊಟ್ಟಿದ್ದನ್ನು ವಾಪಸ್ಸು ಪಟ್ಟಿದ್ದಾರೆ ಅವರನ್ನು ಛೇಂಜ್ ಮಾಡಿದಮೇಲೆ ದೂರು ಕೊಡಂತ್ತೇವೆ. ಅವರನ್ನು ಅಲ್ಲೇ ಇಟ್ಟುಕೊಂಡು ನಾವು ದೂರು ಕೊಟ್ಟರೆ ಅದು ಕಸದ ಬುಟ್ಟಿಗೆ ಹೋಗುತ್ತದೆ.

ಅಧ್ಯಕ್ಷರು,—ಶ್ರೀಮತಿ ಸುಮಾ ವಸಂತ ಅವರೇ, ತಮ್ಮ ಪ್ರಶ್ನೆಗೆ ಟೈಂ ಕೇಳಿದ್ದಾರೆ. ಆಮೇಲೆ ಉತ್ತರ ಕೊಡಿಸುತ್ತೇನೆ.

ಲೋಕಾಯುಕ್ತದವರಿಂದ ಇತ್ಯರ್ಥವಾದ ಅರ್ಜಿಗಳು

೧೬೫೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ ರಿಂದ ೧೯೮೮ರ ವರೆಗೆ ಲೋಕಾಯುಕ್ತಕ್ಕೆ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಇ) ಇತ್ಯರ್ಥಪಡಿಸದೇ ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಲೋಕಾಯುಕ್ತವು ದಿನಾಂಕ ೧೫-೧-೧೯೮೬ರಂದು ಸ್ಥಾಪಿತವಾಗಿದ್ದು, ಆ ದಿನಾಂಕದಿಂದ ದಿನಾಂಕ ೨೫-೫-೧೯೮೮ರ ವರೆವಿಗೆ ೭,೦೯೯ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಆ) ೧) ಇತ್ಯರ್ಥವಾದ ಅರ್ಜಿಗಳ ಸಂಖ್ಯೆ ೬,೬೧೮

೨) ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ೪೮೧

ಇ) ಇತ್ಯರ್ಥಗೊಳಿಸದಿರುವ ಯಾವುದೇ ಪ್ರಕರಣದಲ್ಲಿ ವಿನಾ ಕಾರಣ ವಿಳಂಬವಾಗದಿರುವುದರಿಂದ ಆ ಬಗ್ಗೆ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಒಟ್ಟು ೭೦೯೯ ಅರ್ಜಿಗಳು ಬಂದಿವೆ ಎಂದು ಹೇಳಿದ್ದಾರೆ. ೭೦೯೯ ಅರ್ಜಿಗಳಲ್ಲಿ ಕ್ಲಾಸ್-೧ ಸೂಪರ್ ಟೈಂ ಸ್ಕೇಲ್ ಮತ್ತು ಕ್ಲಾಸ್-೨ ಆಫೀಸರ್‌ಗಳ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ ? ಅವರ ಮೇಲೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ? ಆಮೇಲೆ ಲೋಕಾಯುಕ್ತಕ್ಕೆ ಅಧಿಕಾರಿಗಳನ್ನು ಹಾಕುವಾಗ ಅವರು ಲಂಚ ತೆಗೆದುಕೊಳ್ಳುವವರಲ್ಲ, ನ್ಯಾಯವಾಗಿ ನಡೆದು ಕೊಳ್ಳುವವರು ಎಂದು ಸ್ಕ್ರೀನ್ ಮಾಡಿ ಹಾಕುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದೇ ವಿಚಾರದಲ್ಲಿ ಈಗ ಏನು ಉಪಪ್ರಶ್ನೆ ಕೇಳಿದರೋ ಆ ಪ್ರಶ್ನೆಯನ್ನು ಆನ್ಸರ್ಡ್ ಪ್ರಶ್ನೆಯಾಗಿ ಕಳುಹಿಸಿದ್ದರು. ಅದಕ್ಕೆ ನಾನು ಉತ್ತರ ಕಳುಹಿಸಿದ್ದೇನೆ. ಬೇಕಾದರೆ ಅವರಿಗೆ ಅದರ ಒಂದು ಕಾಪಿಯನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಲೋಕಾಯುಕ್ತದಿಂದ ಲಂಚಗುಳಿತನ ಕಡಿಮೆಯಾಗುತ್ತದೆ, ಅಕ್ರಮ ಕೆಲಸಗಳು ಕಡಿಮೆಯಾಗುತ್ತದೆ ಎಂದು ನಾವು ತಿಂದುಕೊಂಡಿದ್ದೆವು. ಆದರೆ ಅದು ವಿಫಲ